



(ಅವತೀರ್ಣ - ಮಕ್ಕಾದಲ್ಲಿ)

ಪರಮ ದಯಾಮಯನೂ ಕರುಣಾನಿಧಿಯೂ ಆದ ಅಲ್ಲಾಹನ ನಾಮದಿಂದ

بِسْمِ اللّٰهِ الرَّحْمٰنِ الرَّحِيْمِ○

1. ಅಲಿಫ್ ಲಾಮ್ಮೀಮ್.

الٓمّٓ ١

2. ಈ ಗ್ರಂಥದ ಅವತೀರ್ಣವು ನಿಸ್ಸಂದೇಹವಾಗಿಯೂ ಸರ್ವಲೋಕಗಳ ಪಾಲಕ ಪ್ರಭುವಿನ ಕಡೆಯಿಂದಾಗಿರುತ್ತದೆ.

تَنْزِيْلُ الْكِتٰبِ لَا رَيْبَ فِيْهِ
مِنْ رَّبِّ الْعٰلَمِيْنَ ٢

3. ಇದನ್ನು ಈ ವ್ಯಕ್ತಿಯು ಸ್ವತಃ ಸೃಷ್ಟಿಸಿಕೊಂಡಿದ್ದಾನೆಂದು ಇವರು ಹೇಳುತ್ತಾರೆಯೇ? ಅಲ್ಲ; ಇದು ನಿಮ್ಮ ಪ್ರಭುವಿನ ಕಡೆಯಿಂದ ಬಂದ ಸತ್ಯವಾಗಿದೆ. (ಇದು) ನಿಮಗಿಂತ ಮುಂಚೆ ಎಚ್ಚರಿಕೆ ನೀಡುವವರಾರೂ ಬಂದಿಲ್ಲದಂತಹ ಒಂದು ಜನಾಂಗಕ್ಕೆ ನೀವು ಎಚ್ಚರಿಕೆ ನೀಡಲಿಕ್ಕಾಗಿದೆ. ತನ್ಮೂಲಕ ಅವರು ಸನ್ಮಾರ್ಗ ಪಡೆಯಲೂಬಹುದು.

اَمْ يَقُوْلُوْنَ افْتَرٰىهُ ۚ بَلْ هُوَ الْحَقُّ
مِنْ رَّبِّكَ لِتُنْذِرَ قَوْمًا مَّآ اَتٰىهُمْ مِّنْ
نَّذِيْرٍ مِّنْ قَبْلِكَ لَعَلَّهُمْ يَهْتَدُوْنَ ٣

4. ಆಕಾಶಗಳನ್ನೂ ಭೂಮಿಯನ್ನೂ ಅವುಗಳ ನಡುವೆ ಇರುವ ಸಕಲ ವಸ್ತುಗಳನ್ನೂ ಆರು ದಿನಗಳಲ್ಲಿ ಸೃಷ್ಟಿಸಿ, ಅನಂತರ ವಿಶ್ವಸಿಂಹಾಸನಾರೂಢನಾದವನು- ಅಲ್ಲಾಹನೇ. ಅವನ ಹೊರತು ನಿಮಗೆ ಯಾರೂ ರಕ್ಷಕ ಮಿತ್ರನೂ ಇಲ್ಲ. ಅವನ ಮುಂದೆ ಶಿಫಾರಸು ಮಾಡುವವನೂ ಇಲ್ಲ. ಹೀಗಿರುತ್ತ ನೀವೇನು ಜಾಗೃತರಾಗಲಾರಿರಾ?

اَللّٰهُ الَّذِيْ خَلَقَ السَّمٰوٰتِ وَالْاَرْضَ
وَمَا بَيْنَهُمَا فِيْ سِتَّةِ اَيَّامٍ ثُمَّ اسْتَوٰى
عَلَى الْعَرْشِ ۗ مَا لَكُمْ مِّنْ دُوْنِهٖ مِنْ
وَّلِيٍّ وَّلَا شَفِيْعٍ ۗ اَفَلَا تَتَذَكَّرُوْنَ ٤

5. ಅವನು ಆಕಾಶದಿಂದ ಭೂಮಿಯವರೆಗೂ ಲೋಕಾಡಳಿತ ವ್ಯವಸ್ಥೆ ನಡೆಸುತ್ತಾನೆ. ಈ ವ್ಯವಸ್ಥೆಯ ವರದಿಯು ನಿಮ್ಮ ಗಣನೆಯ ಪ್ರಕಾರ ಒಂದು ಸಾವಿರ ವರ್ಷವಾಗಿರುವ ಒಂದು ದಿನದಂದು[1] ಮೇಲಕ್ಕೆ ಅವನ ಸನ್ನಿಧಿಗೆ ಹೋಗುತ್ತದೆ.

يُدَبِّرُ الْاَمْرَ مِنَ السَّمَآءِ اِلَى الْاَرْضِ
ثُمَّ يَعْرُجُ اِلَيْهِ فِيْ يَوْمٍ كَانَ مِقْدَارُهٗٓ
اَلْفَ سَنَةٍ مِّمَّا تَعُدُّوْنَ ٥

1. ಅರ್ಥಾತ್- ನಿಮ್ಮ ಬಳಿ ಇರುವ ಒಂದು ಸಾವಿರ ವರ್ಷಗಳ ಚರಿತ್ರೆಯು ಅಲ್ಲಾಹನ ಮಟ್ಟಿಗೆ ಒಂದು ದಿನದ ಕೆಲಸವಾಗಿದೆ. ಅದರ

6. ಸಕಲ ಪ್ರತ್ಯಕ್ಷಾಪ್ರತ್ಯಕ್ಷಗಳ ಜ್ಞಾನವುಳ್ಳವನು ಅವನೇ. ಅವನು ಪ್ರಬಲನೂ ಕರುಣಾನಿಧಿಯೂ ಆಗಿರುತ್ತಾನೆ.

ذَٰلِكَ عَٰلِمُ ٱلْغَيْبِ وَٱلشَّهَٰدَةِ ٱلْعَزِيزُ ٱلرَّحِيمُ ٦

7. ಅವನು ಮಾಡಿರುವುದೆಲ್ಲವನ್ನೂ ಚೆನ್ನಾಗಿಯೇ ಮಾಡಿರುತ್ತಾನೆ. ಅವನು ಮಾನವ ಸೃಷ್ಟಿಯ ಆರಂಭವನ್ನು ಮಣ್ಣಿನ ಗಾರೆಯಿಂದ ಮಾಡಿದನು.

ٱلَّذِىٓ أَحْسَنَ كُلَّ شَىْءٍ خَلَقَهُۥ ۖ وَبَدَأَ خَلْقَ ٱلْإِنسَٰنِ مِن طِينٍ ٧

8. ತರುವಾಯ ಅವನ ಸಂತತಿಯನ್ನು ತುಚ್ಛವಾದ ನೀರಿನಂತಹ ದ್ರವ್ಯದಿಂದ ಮುಂದುವರಿಸಿದನು.

ثُمَّ جَعَلَ نَسْلَهُۥ مِن سُلَٰلَةٍ مِّن مَّآءٍ مَّهِينٍ ٨

9. ತರುವಾಯ ಅದನ್ನು ನಖಶಿಖಾಂತ ಸುರೂಪಗೊಳಿಸಿದನು ಮತ್ತು ಅದರೊಳಗೆ ತನ್ನ ಆತ್ಮವನ್ನು ಊದಿದನು. ನಿಮಗೆ ಕಿವಿಗಳನ್ನೂ ಕಣ್ಣುಗಳನ್ನೂ ಹೃದಯಗಳನ್ನೂ ಕೊಟ್ಟನು. ನೀವು ಅಲ್ಪವೇ ಕೃತಜ್ಞರಾಗುತ್ತೀರಿ.

ثُمَّ سَوَّىٰهُ وَنَفَخَ فِيهِ مِن رُّوحِهِۦ ۖ وَجَعَلَ لَكُمُ ٱلسَّمْعَ وَٱلْأَبْصَٰرَ وَٱلْأَفْـِٔدَةَ ۚ قَلِيلًا مَّا تَشْكُرُونَ ٩

10. "ನಾವು ಮಣ್ಣು ಪಾಲಾಗಿ ಹೋದ ಬಳಿಕ ಪುನಃ ಹೊಸತಾಗಿ ಸೃಷ್ಟಿಸಲ್ಪಡುತ್ತೇವೆಯೇ?" ಎಂದು ಇವರು ಕೇಳುತ್ತಾರೆ. ವಾಸ್ತವದಲ್ಲಿ ಇವರು ತಮ್ಮ ಪ್ರಭುವಿನ ಭೇಟಿಯನ್ನು ನಿರಾಕರಿಸುವವರಾಗಿದ್ದಾರೆ.

وَقَالُوٓا۟ أَءِذَا ضَلَلْنَا فِى ٱلْأَرْضِ أَءِنَّا لَفِى خَلْقٍ جَدِيدٍۭ ۚ بَلْ هُم بِلِقَآءِ رَبِّهِمْ كَٰفِرُونَ ١٠

11. ನಿಮ್ಮ ಮೇಲೆ ನಿಯುಕ್ತನಾಗಿರುವ ಮೃತ್ಯುದೂತನು ನಿಮ್ಮನ್ನು ಸರ್ವಸಂಪೂರ್ಣವಾಗಿ ತನ್ನ ಹಿಡಿತಕ್ಕೆ ತೆಗೆದುಕೊಳ್ಳುವನು. ತರುವಾಯ ನೀವು ನಿಮ್ಮ ಪ್ರಭುವಿನ ಕಡೆಗೆ ಮರಳಿಸಲ್ಪಡುವಿರಿ ಎಂದು ಇವರೊಡನೆ ಹೇಳಿರಿ.

۞ قُلْ يَتَوَفَّىٰكُم مَّلَكُ ٱلْمَوْتِ ٱلَّذِى وُكِّلَ بِكُمْ ثُمَّ إِلَىٰ رَبِّكُمْ تُرْجَعُونَ ١١

12. ಈ ಅಪರಾಧಿಗಳು ತಲೆ ಬಾಗಿಸಿ ತಮ್ಮ ಪ್ರಭುವಿನ ಮುಂದೆ ನಿಂತಿರುವ ಸಂದರ್ಭವನ್ನು ನೀವು ನೋಡುತ್ತಿದ್ದರೆ! (ಆಗ ಇವರು) "ನಮ್ಮ ಪ್ರಭೂ, ನಾವು ಚೆನ್ನಾಗಿ ನೋಡಿಕೊಂಡೆವು ಮತ್ತು ಕೇಳಿದೆವು. ಇನ್ನು ನಮ್ಮನ್ನು ಸತ್ಕರ್ಮವೆಸಗಲಿಕ್ಕಾಗಿ ಮರಳಿ ಕಳುಹಿಸಿ ಬಿಡು. ಈಗ ನಮಗೆ ಖಾತ್ರಿಯಾಗಿ ತಿಳಿಯಿತು" (ಎನ್ನುತ್ತಿರುವರು).

وَلَوْ تَرَىٰٓ إِذِ ٱلْمُجْرِمُونَ نَاكِسُوا۟ رُءُوسِهِمْ عِندَ رَبِّهِمْ رَبَّنَآ أَبْصَرْنَا وَسَمِعْنَا فَٱرْجِعْنَا نَعْمَلْ صَٰلِحًا إِنَّا مُوقِنُونَ ١٢

ಯೋಜನೆಯನ್ನು, ವಿಧಿಯನ್ನು ದಾಖಲಿಸುವ ಕಾರ್ಯಕರ್ತರಿಗೆ ಒಪ್ಪಿಸಲಾದರೆ ಮರುದಿನ ಅವರು ಅದರ ವರದಿಯನ್ನು ಅಲ್ಲಾಹನ ಮುಂದೆ ಸಮರ್ಪಿಸುತ್ತಾರೆ ಮತ್ತು ಮರುದಿನದ ಅರ್ಥಾತ್ ನಿಮ್ಮ ಗಣನೆಯ ಪ್ರಕಾರ ಒಂದು ಸಾವಿರ ವರ್ಷದ ಕೆಲಸವನ್ನು ತಮಗೆ ಒಪ್ಪಿಸಲಾಗುವುದೆಂದು ನಿರೀಕ್ಷಿಸುತ್ತಾರೆ.

13. "ನಾವಿಚ್ಛಿಸುತ್ತಿದ್ದರೆ ಮೊದಲೇ ಪ್ರತಿಯೊಂದು ಜೀವಕ್ಕೂ ಅದರ ಮಾರ್ಗದರ್ಶನ ನೀಡಿ ಬಿಡುತ್ತಿದ್ದೆವು. ಆದರೆ ನಾನು ನರಕವನ್ನು ಯಕ್ಷಗಳಿಂದಲೂ ಮಾನವರಿಂದಲೂ ತುಂಬಿ ಬಿಡುವೆನೆಂದು ಹೇಳಿದ್ದ ನನ್ನ ಮಾತು ಸರಿಯಾಯಿತು.

وَلَوْ شِئْنَا لَاٰتَيْنَا كُلَّ نَفْسٍ هُدٰىهَا
وَلٰكِنْ حَقَّ الْقَوْلُ مِنِّيْ لَاَمْلَـَٔنَّ
جَهَنَّمَ مِنَ الْجِنَّةِ وَالنَّاسِ اَجْمَعِيْنَ ⑬

14. ಆದುದರಿಂದ ಈಗ ನೀವು ಇಂದಿನ ಭೇಟಿಯನ್ನು ಮರೆತು ಬಿಟ್ಟುದರ ರುಚಿಯನ್ನು ಸವಿಯಿರಿ. ನಾವೂ ಈಗ ನಿಮ್ಮನ್ನು ಮರೆತು ಬಿಟ್ಟಿದ್ದೇವೆ. ನಿಮ್ಮ ದುಷ್ಕೃತ್ಯಗಳ ಫಲವಾಗಿ ಶಾಶ್ವತ ಯಾತನೆಯ ರುಚಿಯನ್ನು ಸವಿಯಿರಿ" (ಎಂದು ಉತ್ತರ ಕೊಡ ಲಾಗುವುದು).

فَذُوْقُوْا بِمَا نَسِيْتُمْ لِقَآءَ يَوْمِكُمْ هٰذَا ۚ
اِنَّا نَسِيْنٰكُمْ وَذُوْقُوْا عَذَابَ الْخُلْدِ
بِمَا كُنْتُمْ تَعْمَلُوْنَ ⑭

15. ನಮ್ಮ ಸೂಕ್ತಗಳನ್ನು ಓದಿ ಹೇಳಿ ಉಪದೇಶಿಸಿದಾಗ ಸಾಷ್ಟಾಂಗವೆರ ಗುವವರೂ ತಮ್ಮ ಪ್ರಭುವಿನ ಸ್ತುತಿಯೊಂದಿಗೆ ಅವನನ್ನು ಜಪಿಸುವವರೂ ಅಹಂಕಾರ ಪ್ರಕಟಿಸದವರೂ ನಮ್ಮ ಸೂಕ್ತಗಳ ಮೇಲೆ ವಿಶ್ವಾಸವಿರಿಸುತ್ತಾರೆ.

اِنَّمَا يُؤْمِنُ بِاٰيٰتِنَا الَّذِيْنَ اِذَا ذُكِّرُوْا
بِهَا خَرُّوْا سُجَّدًا وَّسَبَّحُوْا بِحَمْدِ رَبِّهِمْ
وَهُمْ لَا يَسْتَكْبِرُوْنَ ⑮

16. ಅವರ ಬೆನ್ನುಗಳು ಹಾಸಿಗೆಗಳನ್ನು ಬಿಟ್ಟಿರುತ್ತವೆ. ತಮ್ಮ ಪ್ರಭುವನ್ನು ಭಯ ಹಾಗೂ ನಿರೀಕ್ಷೆಯೊಂದಿಗೆ ಪ್ರಾರ್ಥಿಸುತ್ತಾರೆ. ನಾವು ಅವರಿಗೆ ದಯಪಾಲಿಸಿರುವ ಜೀವನಾಧಾರದಿಂದ ಖರ್ಚು ಮಾಡುತ್ತಾರೆ.

تَتَجَافٰى جُنُوْبُهُمْ عَنِ الْمَضَاجِعِ يَدْعُوْنَ
رَبَّهُمْ خَوْفًا وَّطَمَعًا ۟ وَّمِمَّا رَزَقْنٰهُمْ
يُنْفِقُوْنَ ⑯

17. ಮುಂದೆ ಅವರ ಕರ್ಮಗಳಿಗೆ ಪ್ರತಿಫಲವಾಗಿ ಅವರ ಕಣ್ಮನಗಳನ್ನು ತಣಿಸುವಂತಹ ಯಾವ ಸತ್ಫಲಗಳನ್ನು ಅವರಿಗಾಗಿ ಬಚ್ಚಿಡಲಾಗಿ ದೆಯೋ ಅದರ ಅರಿವು ಯಾವ ಜೀವಿಗೂ ಇಲ್ಲ.

فَلَا تَعْلَمُ نَفْسٌ مَّآ اُخْفِيَ لَهُمْ مِّنْ
قُرَّةِ اَعْيُنٍ ۚ جَزَآءًۢ بِمَا كَانُوْا يَعْمَلُوْنَ ⑰

18. ಸತ್ಯವಿಶ್ವಾಸಿಯಾದವನು ಕರ್ಮಭ್ರಷ್ಟನಂತಾಗಿರಲು ಎಂದಾದರೂ ಸಾಧ್ಯವಿದೆಯೆ? ಇವರಿಬ್ಬರೂ ಸರಿ ಸಮಾನರಾಗಲಾರರು.

اَفَمَنْ كَانَ مُؤْمِنًا كَمَنْ كَانَ فَاسِقًا ؕ
لَا يَسْتَوٗنَ ⑱

19. ಸತ್ಯವಿಶ್ವಾಸವನ್ನಿರಿಸಿದವರಿಗಾಗಿ ಮತ್ತು ಸತ್ಕರ್ಮವೆಸಗಿದವರಿಗಾಗಿ ಅವರ ಸತ್ಕರ್ಮಗಳ ಪ್ರತಿಫಲವಾಗಿ ಆತಿಥ್ಯ ರೂಪದಲ್ಲಿ ಸ್ವರ್ಗೋ ದ್ಯಾನಗಳ ವಸತಿಗಳಿವೆ

اَمَّا الَّذِيْنَ اٰمَنُوْا وَعَمِلُوا الصّٰلِحٰتِ
فَلَهُمْ جَنّٰتُ الْمَاْوٰى ۫ نُزُلًۢا بِمَا كَانُوْا
يَعْمَلُوْنَ ⑲

20. ಮತ್ತು ಕರ್ಮಭ್ರಷ್ಟ ನೀತಿ ಕೈಗೊಂಡವರ ವಾಸಸ್ಥಾನವು ನರಕಾಗ್ನಿಯಾಗಿದೆ. ಅವರು ಅಲ್ಲಿಂದ ಹೊರ ಹೊರಡಲಿಚ್ಛಿಸಿದಾಗ ಲೆಲ್ಲ ಅದರೊಳಕ್ಕೇ ತಳ್ಳಲ್ಪಡುವರು ಮತ್ತು ನೀವು ಸುಳ್ಳಾಗಿಸುತ್ತಿದ್ದ ಅದೇ ನರಕಾಗ್ನಿಯ ರುಚಿಯನ್ನು ಸವಿಯಿರೆಂದು ಅವರೊಡನೆ ಹೇಳಲಾಗುವುದು.

وَاَمَّا الَّذِيْنَ فَسَقُوْا فَمَاْوٰىهُمُ النَّارُ ؕ
كُلَّمَآ اَرَادُوْٓا اَنْ يَّخْرُجُوْا مِنْهَآ اُعِيْدُوْا
فِيْهَا وَقِيْلَ لَهُمْ ذُوْقُوْا عَذَابَ النَّارِ
الَّذِيْ كُنْتُمْ بِهٖ تُكَذِّبُوْنَ ⑳

21. ಇವರು (ತಮ್ಮ ಬಂಡಾಯ ನೀತಿಯಿಂದ) ಹಿಂಜರಿಯಬಹುದೆಂದು ನಾವು ಇವರಿಗೆ ಆ ಮಹಾ ಯಾತನೆಗೆ ಮುಂಚೆ ಈ ಲೋಕದಲ್ಲೇ (ಒಂದಲ್ಲೊಂದು ಚಿಕ್ಕ ಪುಟ್ಟ) ಯಾತನೆಯ ರುಚಿಯನ್ನು ಸವಿಸುತ್ತಲೇ ಇರುವೆವು.

وَلَنُذِيقَنَّهُمْ مِّنَ الْعَذَابِ الْأَدْنَىٰ دُونَ
الْعَذَابِ الْأَكْبَرِ لَعَلَّهُمْ يَرْجِعُونَ ﴿٢١﴾

22. ತನ್ನ ಪ್ರಭುವಿನ ನಿದರ್ಶನಗಳ ಮೂಲಕ ಉಪದೇಶ ನೀಡಲಾದ ಬಳಿಕವೂ ಅವುಗಳಿಂದ ವಿಮುಖನಾಗುವವನಿಗಿಂತ ದೊಡ್ಡ ಅಕ್ರಮಿ ಯಾರಿರಬಹುದು? ಇಂತಹ ಅಪರಾಧಿಗಳಿಂದ ನಾವು ಪ್ರತೀಕಾರ ಪಡೆದೇ ತೀರುವೆವು.

وَمَنْ أَظْلَمُ مِمَّن ذُكِّرَ بِآيَاتِ رَبِّهِ
ثُمَّ أَعْرَضَ عَنْهَا ۚ إِنَّا مِنَ الْمُجْرِمِينَ
مُنتَقِمُونَ ﴿٢٢﴾ ع ١٥ ٢

23. ನಾವು ಇದಕ್ಕೆ ಮುಂಚೆ ಮೂಸಾರಿಗೆ ಗ್ರಂಥ ನೀಡಿದ್ದೇವೆ. ಆದುದರಿಂದ ಅದೇ ವಸ್ತು ಸಿಗುವಾಗ ನಿಮಗೇನೂ ಸಂಶಯ ಉಂಟಾಗಬಾರದು. ಆ ಗ್ರಂಥವನ್ನು ನಾವು ಬನೀಇಸ್ರಾಈಲರಿಗೆ ಸನ್ಮಾರ್ಗದರ್ಶಕವಾಗಿ ಮಾಡಿದ್ದೆವು.

وَلَقَدْ آتَيْنَا مُوسَى الْكِتَابَ فَلَا تَكُن
فِي مِرْيَةٍ مِّن لِّقَائِهِ ۖ وَجَعَلْنَاهُ هُدًى
لِّبَنِي إِسْرَائِيلَ ﴿٢٣﴾

24. ಅವರು ತಾಳ್ಮೆ ವಹಿಸಿದಾಗ ಮತ್ತು ನಮ್ಮ ಸೂಕ್ತಗಳನ್ನು ನಂಬುತ್ತಿದ್ದಾಗ ನಾವು ಅವರೊಳಗಿಂದ, ನಮ್ಮ ಆಜ್ಞೆಯಿಂದ ಮಾರ್ಗದರ್ಶನ ಮಾಡುತ್ತಿದ್ದಂತಹ ಮುಂದಾಳುಗಳನ್ನು ಎಬ್ಬಿಸಿದೆವು.

وَجَعَلْنَا مِنْهُمْ أَئِمَّةً يَهْدُونَ بِأَمْرِنَا
لَمَّا صَبَرُوا ۖ وَكَانُوا بِآيَاتِنَا يُوقِنُونَ ﴿٢٤﴾

25. (ಬನೀಇಸ್ರಾಈಲರು) ಪರಸ್ಪರ ಭಿನ್ನಾಭಿಪ್ರಾಯ ತಾಳುತ್ತಾ ಬಂದಿರುವ ವಿಷಯಗಳ ತೀರ್ಮಾನವನ್ನು ಖಂಡಿತವಾಗಿಯೂ ನಿಮ್ಮ ಪ್ರಭುವೇ ಪುನರುತ್ಥಾನದಿನ ಮಾಡುವನು.

إِنَّ رَبَّكَ هُوَ يَفْصِلُ بَيْنَهُمْ يَوْمَ
الْقِيَامَةِ فِيمَا كَانُوا فِيهِ يَخْتَلِفُونَ ﴿٢٥﴾

26. ಇವರಿಗಿಂತ ಮುಂಚೆ ನಾವೆಷ್ಟೋ ಜನಾಂಗಗಳನ್ನು ನಾಶಗೊಳಿಸಿದ್ದೇವೆ. ಅವರು ವಾಸಿಸುತ್ತಿದ್ದ ಸ್ಥಳಗಳಲ್ಲಿ ಈಗ ಇವರು ಸಂಚರಿಸುತ್ತಾರೆ. (ಈ ಐತಿಹಾಸಿಕ ಘಟನೆಗಳಿಂದ) ಇವರಿಗೇನೂ ಮಾರ್ಗದರ್ಶನ ಸಿಗಲಿಲ್ಲವೇ? ಇದರಲ್ಲಿ ದೊಡ್ಡ ನಿದರ್ಶನಗಳಿವೆ. ಇವರಿಗೆ ಕೇಳಿಸುವುದಿಲ್ಲವೇ?

أَوَلَمْ يَهْدِ لَهُمْ كَمْ أَهْلَكْنَا مِن قَبْلِهِم
مِّنَ الْقُرُونِ يَمْشُونَ فِي مَسَاكِنِهِمْ ۚ إِنَّ
فِي ذَٰلِكَ لَآيَاتٍ ۖ أَفَلَا يَسْمَعُونَ ﴿٢٦﴾

27. ನಾವು ಒಂದು ಬಂಜರು ಭೂಭಾಗದ ಕಡೆಗೆ ನೀರನ್ನು ಹರಿಸಿ ತರುವುದನ್ನೂ ತರುವಾಯ ಅದೇ ನೆಲದಿಂದ ಇವರ ಜಾನುವಾರುಗಳಿಗೆ ಮೇವು ಸಿಗುವ ಹಾಗೂ ಇವರು ಸ್ವತಃ ಉಣ್ಣುವಂತಹ ಬೆಳೆಯನ್ನು ಬೆಳೆಸುತ್ತಿರುವ ದೃಶ್ಯವನ್ನೂ ಇವರೆಂದೂ ಕಂಡಿಲ್ಲವೇ? ಇವರಿಗೇನೂ ತೋಚುವುದಿಲ್ಲವೇ?

أَوَلَمْ يَرَوْا أَنَّا نَسُوقُ الْمَاءَ إِلَى
الْأَرْضِ الْجُرُزِ فَنُخْرِجُ بِهِ زَرْعًا
تَأْكُلُ مِنْهُ أَنْعَامُهُمْ وَأَنفُسُهُمْ ۖ
أَفَلَا يُبْصِرُونَ ﴿٢٧﴾ الثلث

28. "ನೀವು ಸತ್ಯವಾದಿಯಾಗಿದ್ದರೆ, ಈ ತೀರ್ಮಾನ ಆಗುವುದು ಯಾವಾಗ?" ಎಂದು ಇವರು ಕೇಳುತ್ತಾರೆ.

وَيَقُولُونَ مَتَىٰ هَٰذَا الْفَتْحُ إِن
كُنتُمْ صَادِقِينَ ﴿٢٨﴾

29. "ತೀರ್ಪಿನ ದಿನ ವಿಶ್ವಾಸವಿರಿಸುವುದರಿಂದ ಸತ್ಯನಿಷೇಧಿಗಳಿಗೆ ಏನೂ ಪ್ರಯೋಜನವಾಗದು. ಆ ಬಳಿಕ ಅವರಿಗೆ ಸ್ವಲ್ಪವೂ ಕಾಲಾವಕಾಶ ಸಿಗದು" ಎಂದು ಇವರೊಡನೆ ಹೇಳಿರಿ.

قُلْ يَوْمَ الْفَتْحِ لَا يَنفَعُ الَّذِينَ
كَفَرُوا إِيمَانُهُمْ وَلَا هُمْ يُنظَرُونَ ﴿٢٩﴾

30. ಸರಿ; ಇವರನ್ನು ಇವರಷ್ಟಕ್ಕೆ ಬಿಟ್ಟು ಬಿಡಿರಿ ಮತ್ತು ಕಾಯುತ್ತಲಿರಿ. ಇವರೂ ಕಾಯುತ್ತಿದ್ದಾರೆ.

فَأَعْرِضْ عَنْهُمْ وَانتَظِرْ إِنَّهُم مُّنتَظِرُونَ ﴿٣٠﴾
